ಸಹಿಸಿಕೊಳ್ಳುತ್ತೇವೆ, ಭ್ರಷ್ಟಾಚಾರವನ್ನೂ ಕ್ಷಮಿಸಿಬಿಡುತ್ತೇವೆ, ಸಮಾಜದ ಓರೆಕೋರೆಗಳನ್ನು ನಿರ್ಲಕ್ಷಿಸುತ್ತೇವೆ... ಆದರೆ ಈ ಚಿಕ್ಕ ಕೋಪವೆಂಬ ಸಹಜತೆಗೆ ನಮ್ಮಲ್ಲಿ ಎಂಥಾ ತಾರತಮ್ಯ ಮಾಡುತ್ತೇವೆಂದರೆ, ಆ ಸಿಟ್ಟಿಗೂ ಎಷ್ಟು ಬೇಸರ ಆಗಬಹುದು ಯೋಚಿಸಿ ನೋಡೀಪಾ!

ಪಾಪ, ಈ ಸಿಟ್ಟು ಎನ್ನುವ ವಿಷಯ ಎಂಥಾ ಅನಾಥ ಭಾವನೆಯನ್ನು ಹುಟ್ಟು ಹಾಕುತ್ತೆ ಎಂದರೆ ಯಾವ ಮಾರಕ/ಸಾಂಕ್ರಾಮಿಕ ರೋಗಕ್ಕೂ ಇಷ್ಟು ಒಬ್ಬಂಟಿತನ, ಐಸೋಲೇಶನ್ ಇರಲಾರದು.

ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಡಬಾರದು ಅಂತ ಹೇಳುವ ಅನುಕೂಲಸಿಂಧು ಜನ ಒಂದನ್ನು ಅರ್ಥ ಮಾಡಿಕೊಳ್ಳಬೇಕು. ಕೋಪ ಎನ್ನುವುದು ನಿಸರ್ಗದಲ್ಲೇ ಇದೆ. ನಮ್ಮ ದೇವರುಗಳಲ್ಲೂ ಕೋಪ ಇದೆ. ಹಾಗೆ ದೇವರಿಗೆ ಕೋಪ ಬಂದಾಗಲೇ ಈ ಜಗತ್ತಿಗೆ ಒಳ್ಳೆಯದಾಗಿರುವುದು. ದೇವರನ್ನು ಸಂಪ್ರೀತಗೊಳಿಸಿ ಅವರಿಂದ ತಮಗೆ ಬೇಕಾದ ವರ ಪಡೆದು ಲೋಕಕ್ಕೆ ಹಾನಿ ಮಾಡಲು ಹೊರಟ ದುಷ್ಟ ಶಕ್ತಿಗಳನ್ನು ನಾಶ ಮಾಡಲು ಸಿಟ್ಟಿರುವ ಇನ್ನೊಬ್ಬ ದೇವರೇ ಬರಬೇಕಾಗುತ್ತೆ. ದೇವರಿಗೆ ಸಿಟ್ಟು ಬರುತ್ತೆ ಎನ್ನುವ ಭಯವೇ ಇಂದಿಗೂ ಜಗತ್ತಿನಲ್ಲಿ ಹಲವರಿಗೆ ಒಳ್ಳೆಯವರಾಗಿ ಬದುಕಲು ಇರುವ ಪ್ರೇರಣೆ. ಬೇಕಾದರೆ ನೀವು ಬಾಲ್ಯದಲ್ಲಿ ಕೇಳಿದ ಕತೆಗಳನ್ನು ನೆನೆಸಿಕೊಳ್ಳಿ – ಶಿವ, ಕಾಳಿ, ದುರ್ಗೆ, ವಿಷ್ಣು ಇವರೆಲ್ಲಾ ಸಿಟ್ಟನ್ನು ಬಳಸಿ ಲೋಕಕಲ್ಯಾಣ ಮಾಡಿದವರೇ ಅಲ್ಲವೇ?

ಅಕ್ಕಮಹಾದೇವಿಗೆ ಗಂಡನ ಮೇಲೆ ಸಿಟ್ಟು ಬಂದು ಮದುವೆ ಎಂಬ ಬಂಧನದಿಂದ ಹೊರನಡೆದದ್ದಕ್ಕೆ ವಚನ ಚಳವಳಿಗೆ ಎಂಥಾ ಆಯಾಮ ಬಂತು ಎನ್ನುವುದನ್ನು ನಾವು ಎಂದಿಗೂ ಮರೆಯಬಾರದು.

"ಖಾರ ಜಾಸ್ತಿ ತಿಂದರೆ ಸಿಟ್ಟು ಜಾಸ್ತಿ ಬರುತ್ತೆ" ಅಂತ ಸರಳವಾಗಿ ಹೇಳುವವರಿದ್ದಾರೆ. ಖಾರ ಅಥವಾ ತಾಮಸ ಆಹಾರ ತಿಂದ ಜನ ಬೆವೆತು ಬೆವೆತು ತಣ್ಣಗಾಗಿರುತ್ತಾರೆ. ಸಾತ್ವಿಕ ಆಹಾರ ತಿಂದು ಮಾತು ಮಾತಿಗೂ ಸಿಟ್ಟಾಗುವವರ ಸಂಖ್ಯೆಯೇನು ಕಡಿಮೆ ಇಲ್ಲ.

ಮುನಿ ಎನ್ನುವ ಪದ ಕೇಳಿದ್ದೀರಲ್ಲ? ಸಿಟ್ಟಿಗೆ ಇನ್ನೊಂದು ಹೆಸರೇ ಮುನಿ ಎನ್ನುವುದು ನಿಮಗೆ ಗೊತ್ತಿರಲೇಬೇಕು. ಮುನಿ ಎನ್ನುವ ಪದದ ಮತ್ತೊಂದು ಅರ್ಥ ಋಷಿ, ಸಾಧು, ಸನ್ಯಾಸಿ ಅಂತ ಇದೆ. ಸಿಟ್ಟಿಗೆ ಹೆಸರಾದ ಮುನಿಗಳ, ದೇವ ದೇವತೆಗಳ ಉಲ್ಲೇಖ ಹಿಂದೂ ಧರ್ಮದಲ್ಲೇ ಸಿಗುತ್ತದೆ. ದೂರ್ವಾಸ, ಇಂದ್ರ, ಅಗಸ್ತ್ಯ ಇವರೆಲ್ಲಾ ಸಿಟ್ಟಿಗೆ ಪ್ರಸಿದ್ಧರಲ್ಲವೇ? ವರ್ಷಾನುಗಟ್ಟಲೆ ಆಹಾರ ಸೇವಿಸದೆ, ಅಥವಾ ಸಾತ್ವಿಕ ಆಹಾರವಾದ ಕಂದಮೂಲಗಳನ್ನು ಸೇವಿಸಿ ತಪಸ್ಸು ಮಾಡಿ ಪಡೆದುಕೊಂಡ ಶಕ್ತಿಯನ್ನು ಒಂದು ಶಾಪದಲ್ಲಿ ಕಳೆದುಬಿಡಲಿಲ್ಲವೇ? ಕೋಪ ಎನ್ನುವುದು ಹಾಗೆ ಸುಲಭಕ್ಕೆ ಮೀರಲಾಗದ ಒಂದು ಗೆರೆ ಎನ್ನುವುದು ಇದರಿಂದ ಅರ್ಥವಾದರೆ ಉತ್ತಮ.

ಪ್ರಕೃತಿಯಲ್ಲೇ ಸಿಟ್ಟಿದೆ. ಭೂಮಿಗೆ ಸಿಟ್ಟು ಬಂದಾಗ ಕಾಳ್ಗಿಚ್ಚು, ಭೂಕಂಪ ಉಂಟಾಗುತ್ತದೆ ಅಂತ ನಂಬೋಣ. ಹೀಗೆ ಆಗುವಲ್ಲಿ ಕೆಲವು ಮನುಷ್ಯರು ಮಾಡಿದ ಕಾರ್ಯಗಳಿಗೆ ಪ್ರತಿಯಾಗಿ ನಿಸರ್ಗ ತೋರಿಸುವ ಕೋಪ ಎಂದರೆ, ಆ ಕೋಪ ಬರದೇ ಹೋದರೆ ಮನುಷ್ಯ ಇನ್ನಷ್ಟು ಅಹಂಕಾರಿಯಾಗಿ ಮೆರೆಯುತ್ತಿದ್ದ. ಹಾಗಾಗಿ ಕೋಪದಿಂದ ಒಳ್ಳೆಯದೇ ಆಗುತ್ತದೆ ಅಂತ ತಿಳಿದುಕೊಳ್ಳಬೇಕು. ಪ್ರಾಣಿಗಳಿಗೂ ಕೋಪ ಬರುತ್ತದೆ. ಅದು ಸ್ವರಕ್ಷಣೆಯ ತಂತ್ರ. ಇರುವೆಯ ಗೂಡಿನ ಮೇಲೆ ಅಥವಾ ಹತ್ತಿರ ನಿಂತರೂ ಅದರ ಸಿಟ್ಟು ಅನುಭವಕ್ಕೆ ಬರುತ್ತದೆ. ಅಷ್ಟು ಸೂಕ್ಷ್ಮಜೀವಿಗೂ ಸಿಟ್ಟು ಬರುತ್ತದೆ ಎಂದರೆ ಮನುಷ್ಯರಿಗೇಕೆ ಸಿಟ್ಟನ್ನು ಮೀರುವ ಸಡಗರ?

ಇನ್ನು ಮುಟ್ಟಿದರೆ ಮುನಿ ಎನ್ನುವ ಗಿಡ ಇದೆ. ನೆಲದಲ್ಲೇ ಪಸರಿಸಿಕೊಳ್ಳುವ ಆ ಗಿಡವನ್ನು ನಾಚಿಕೆ ಮುಳ್ಳಿನ ಗಿಡ ಅಂತಲೂ ಕೆಲವು ಕಡೆ ಕರೆಯುತ್ತಾರೆ. ಸೂಕ್ಷ್ಮ ಮುಳ್ಳುಗಳನ್ನು ಹೊಂದಿರುವ ಆ ಗಿಡವನ್ನು ಯಾರಾದರೂ ಮುಟ್ಟಿದರೆ/ತುಳಿದರೆ ತಕ್ಷಣ ತನ್ನ ಎಲ್ಲಾ ಎಲೆಗಳನ್ನು ಮುಚ್ಚಿಕೊಂಡುಬಿಡುತ್ತದೆ. ಆ ಗಿಡದ ಹೆಸರುಗಳು ಎಷ್ಟು ವಿಚಿತ್ರವಾಗಿವೆ ಅಂದರೆ ಒಂದು ಸಿಟ್ಟಾದರೆ